

### ಸಂವಹನ ಮಾರ್ಗದರ್ಶಿ

'ಸುಧಾ' ಮೇ15ರ ಸಂಚಿಕೆಯ ಮುಖಪುಟ ಲೇಖನ ನಡಹಳ್ಳಿ ವಸಂತ್ ಅವರ 'ಸುಲಭ ಸಂವಹನಕ್ಕೆ ಹಲವು ಸೂತ್ರ'ಗಳು ಸಂವಹನ ಕಲೆಯ ಮಾರ್ಗದರ್ಶಿಯಂತಿದೆ.

-ಸು.ವಿಜಯಲಕ್ಷ್ಮಿ,ಶಿವಮೊಗ್ಗ/ ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ/ ಎಂ.ಮೃತ್ಯುಂಜಯಪ್ಪ, ಚಿತ್ರದುರ್ಗ/ ಆರ್.ಮಣಿ, ಹಾಡ್ಯ/ ಎಂ.ಜಿ.ರಾಮಚಂದ್ರ, ಮಂಡಗಳಲೆ

### ಸೂಕ್ತ ವಿಚಾರ ಲಹರಿ

ವೈನತೇಯ ಅವರ 'ಅಪರಿಗ್ರಹ' ವಿಚಾರ ಲಹರಿ ಸೂಕ್ತವಾಗಿದೆ.

-ಮಹಾವೀರ ಕಾಸರ, ಶಿವಮೊಗ್ಗ/ ಕಾಡನೂರು ರಾಮಶೇಷ, ಹುಲಿಮಂಗಲ/ ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ

### ಪದಬ್ರಹ್ಮ ರಾಮ್

'ನೀವು ಕೇಳಿದಿರಿ?' ವಿಭಾಗದಲ್ಲಿ 'ವಿಧವೆಗೂ, ವೇಶ್ಯೆಗೂ ಇರುವ ವ್ಯತ್ಯಾಸವೇನು?' ಎಂಬ ಓದುಗರ ಪ್ರಶ್ನೆಗೆ ರಾಮ್ ನೀಡಿದ ಉತ್ತರ 'ವಿಧವೆ ಮುಕ್ಕಾದ ಶಿಲ್ಪ, ವೇಶ್ಯೆ ಹಾಸುಗಲ್ಲು'. ಸೂಪರ್ಬ್! ಎರಡೇ ಪದಗಳಲ್ಲಿ ಹೆಣ್ಣಿನ ಬದುಕಿನ ಎರಡು ಸ್ಥಿತ್ಯಂತರಗಳನ್ನು ಅದ್ಭುತವಾಗಿ ವಿಶ್ಲೇಷಿಸಿದ ರಾಮ್‌ಜಿ ನಿಜಕ್ಕೂ 'ಪದಬ್ರಹ್ಮ'ರೆ ಸರಿ.

-ಶೀಲಾ ಸತ್ಯೇಂದ್ರಸ್ವಾಮಿ, ಹರವೆಮಠ

### ಮೈಜುಮ್ಮೆಂದಿತು

ಸುಭಾಸ ಯಾದವಾಡ ಪರಿಚಯಿಸಿರುವ 'ಜೇನು ರಾಣಿ' ಓದಿ ಮೈಜುಮ್ಮೆಂದಿತು. -ರವೀಂದ್ರನಾಥ, ಬೀಳಗಿ

### ಬುದ್ಧಿಮತ್ತೆಯ ದ್ಯೋತಕ

'ಸೂಪರ್ ಪವರ್ ಸೈಕಲ್' (ಬರಹ: ಶಿವಲಿಂಗ ಸಿದ್ನಾಳ್) ವಿದ್ಯಾರ್ಥಿಗಳ ಬುದ್ಧಿಮತ್ತೆಯ ದ್ಯೋತಕವಾಗಿದೆ. -ಮೇ.ಗೋ.ಸುಬ್ಬಣ್ಣ, ಮೇಗರವಳ್ಳಿ

### ಮನೋಜ್ಞ ಕಥೆ

ಕಲ್ಲೇಶ್ ಕುಂಬಾರ್ ಅವರ ಕಥೆ 'ಗಗನಕ್ಕೆ ನಿಚ್ಚಣಿಕೆಯನಿಕ್ಕಿ' ಕಥೆ ಮನೋಜ್ಞವಾಗಿತ್ತು. -ರಾಜಶೇಖರ ಗೌಡ, ಕೊಟ್ಟೂರು

### ಹೃದಯಸ್ಪರ್ಶಿ ಕಥೆ

ಸ.ಹರೀಶ್ ಸಾವಿನ ಕುರಿತು ಬರೆದಿರುವ ಚುಟುಕು ಕಥೆಗಳು ಹೃದಯಸ್ಪರ್ಶಿಯಾಗಿವೆ. -ಆರ್.ಎಸ್.ಯಡಹಳ್ಳಿ, ಬೀಳಗಿ

### ಛಬ್ಬಿ ಅರ್ಥೈಸಿರುವುದು ಸರಿ ಇಲ್ಲ

'ಸುಖೀಭವ' ವಿಭಾಗದಲ್ಲಿ ಇಸ್ಲಾಂ ಧರ್ಮದ 'ಸುನ್ನತಿ' ವಿಷಯದ ಕುರಿತು ಡಾ. ವಿನೋದ ಛಬ್ಬಿ ವ್ಯಕ್ತಪಡಿಸಿರುವ ಅಭಿಪ್ರಾಯ ಸರಿಯಲ್ಲ. ನೀರಿನ ಕೊರತೆ ಇರುವುದರಿಂದ 'ಸುನ್ನತಿ' ಮಾಡಿಸಿಕೊಳ್ಳುವ ಕ್ರಮ ಜಾರಿಯಾಯಿತು ಎಂದು ಅವರು ಬರೆದಿದ್ದಾರೆ. ಇಸ್ಲಾಂ ಧರ್ಮದಲ್ಲಿ ಸ್ತ್ರೀ ಪುರುಷ ಭೇದವಿಲ್ಲದೆ ಮೂತ್ರ ವಿಸರ್ಜನೆ ಬಳಿಕ ಜನನಾಂಗಗಳ ಶುದ್ಧೀಕರಣ ಕಡ್ಡಾಯವಾಗಿದೆ. ಇದಕ್ಕಿರುವ ವೈಜ್ಞಾನಿಕ ಕಾರಣಗಳನ್ನು ಛಬ್ಬಿಯವರು ದುರ್ಬಲಗೊಳಿಸಿರುವುದು ಕಂಡುಬರುತ್ತದೆ. -ಪಿ.ಕೆ.ಅಹಮ್ಮದ್ ಹುಸೈನ್, ಪೈವಳಿಕೆ

### ಇಷ್ಟವಾಗುವ ಧಾರಾವಾಹಿಗಳು

'ಸುಧಾ' ಶುರುವಾದಾಗಿನಿಂದ ನಮ್ಮ ತಾಯಿ ಅದರ ಓದುಗರು. ಇನ್ನು ಮುಂದೆ ಬಿಟ್ಟುಬಿಡೋಣ ಎಂದು ನಮಗೆ ಎಷ್ಟೇ ಸಲ ಅನ್ನಿಸಿದರೂ 'ಸುಧಾ' ಓದುವುದನ್ನು ನಿಲ್ಲಿಸಲು ಮನಸ್ಸು ಬರುತ್ತಿಲ್ಲ. 'ಸುಧಾ'ದಲ್ಲಿ ಪ್ರಕಟವಾಗುವ ಧಾರಾವಾಹಿಗಳು ನನಗೆ ಬಹಳ ಇಷ್ಟ. 'ಜಂಬೂಕ', 'ಜನುಮ ಜನುಮಕೂ' ಹಾಗೂ ಈಗ ಪ್ರಕಟವಾಗುತ್ತಿರುವ 'ಹಾವು ಏಣಿ' ಇಷ್ಟವಾಗಿವೆ. ಮಧ್ಯದಲ್ಲಿ ಚಂಪಾವತಿ ಅವರ ಅಸಂಗತ ಕಾದಂಬರಿ ಮಾತ್ರ ಇಷ್ಟವಾಗಲಿಲ್ಲ ಅಥವಾ ನನಗೇ ಅದು ಅರ್ಥವಾಗಲಿಲ್ಲ. ಎರಡು ವರ್ಷದ ಹಿಂದೆ ಧಾರಾವಾಹಿಗಳಿಗೆ ಮನೋಹರ್ ಚಿತ್ರಗಳು ಚೆನ್ನಾಗಿ ಮೂಡಿ ಬರುತ್ತಿದ್ದವು. ಅವರದೇ ಚಿತ್ರಗಳು ಈಗ ಏಕೋ ಅಷ್ಟು ಇಷ್ಟವಾಗುತ್ತಿಲ್ಲ.

-ಜಾಹ್ನವಿ, ಕೆ.ಆರ್.ನಗರ

### ಧಾರಾವಾಹಿ ಮರು ಪ್ರಕಟಿಸಿ

ಹಲವು ಪತ್ರಿಕೆಗಳು ತಮ್ಮ ಹಳೆಯ ಪ್ರತಿಗಳ ಲೇಖನಗಳನ್ನು ಮತ್ತೆ ಮುದ್ರಿಸುತ್ತವೆ. ಐವತ್ತು ವರ್ಷಗಳಷ್ಟು ಹಿಂದಿನ 'ಸುಧಾ' ಏಕೆ ತನ್ನ ಹಳೇ ಧಾರಾವಾಹಿಗಳನ್ನು ಪುನಃ ಪ್ರಕಟಿಸಬಾರದು?

-ನೇ.ಗೋ.ಭ., ಕುಕ್ಕೆಸುಬ್ರಹ್ಮಣ್ಯ




